ಒ ಎಸ್ 88-2015

ಪಿಡಬ್ಲ್ಯೂ- 1

(ದಿನಾಂಕ 02-03-2019 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣಿಕರಿಸಲಾಯಿತು.)

**ಪಾಟೀ ಸವಾಲು ಪ್ರತಿವಾದಿ 1 ಮತ್ತು 2 ಪರ ಶ್ರೀ ಬಿ. ಪಿ. ವಕೀಲರಿಂದಃ-**

ದಾವಾ ಆಸ್ತಿಯು ಮೂಲತಃ ನನ್ನ ಮನೆಯವರಿಗೆ ಸಂಬಂದಪಟ್ಟದ್ದು ಆಗಿರುತ್ತದೆ. ದಾವಾ ಆಸ್ತಿಯು ಮಾಲತಃ ಹೊನ್ನೂರು ಸಾಬರಿಗೆ ಸರ್ಕಾರದಿಂದ ಪಟ್ಟಾ ಕೊಟ್ಟಿತ್ತು ಎಂದರೆ ಸಾಕ್ಷಿಯು ನಾಣ್ಯಾಪುರದ ಹನುಮಂತ ಶೆಟ್ಟರು ಖರೀ ದಿ ಮಾಡಿದ್ದು ನಂತರ ನನ್ನ ಗಂಡ ಖರೀದಿ ಮಾಡಿರುವುದಾಗಿ ಹೇಳಿರುತ್ತಾರೆ. ಸದರಿ ಸ್ವತ್ತನ್ನು ನನ್ನ ಗಂಡ ಸುಮಾರು 40-50 ವರ್ಷಗಳ ಹಿಂದೆ ಖರೀದಿ ಮಾಡಿರುತ್ತಾರೆ. ಅದನ್ನು ಅಳತೆ ಮಾಡಿ ಖರೀದಿ ಮಾಡಿದ್ದಾರೆ ಎಂದರೆ ಸರಿ. ನನ್ನ ಮನೆಯವರು 2001 ರಲ್ಲಿ ಮರಣ ಹೊಂದಿರುತ್ತಾರೆ. ದಾವಾ ಸ್ವತ್ತು ನನ್ನ ಹೆಸರಿಗೆ ಅದೇ ವರ್ಷ ಹಕ್ಕು ಬದಲಾವಣೆ ಆಗಿರುತ್ತದೆ. ನನ್ನ ಗಂಡ ಖರೀದಿ ಮಾಡಿದ ದಿನಾಂಕದಿಂದ ನಾನು ಅದರಲ್ಲೇ ವಾಸವಾಗಿದ್ದೇವೆ ಎಂದರೆ ಸರಿ. ಅದನ್ನು ನನ್ನ ಯಜಮಾನರು ಅಳತೆ ಮಾಡಿಸಿರುತ್ತಾರೆ. ನಾನು ಗ್ರಾಮ ಪಂಚಾಯತಿಗೆ, ಪೊಲೀಸ್ ಠಾಣೆಗೆ ಹಲವಾರು ಬಾರಿ ಹೋಗಿದ್ದು ಯಾವುದೇ ಪ್ರತಿಕ್ರಿಯೇ ನೀಡಿರುವುದಿಲ್ಲ. ನನ್ನ ಮನೆಯ ದಕ್ಷಿಣ ದಿಕ್ಕಿಗೆ ಪ್ರತಿವಾದಿ 1 ರವರು ಇದ್ದಿರುತ್ತಾರೆ. ನಮ್ಮ ಮತ್ತು ಪ್ರತಿವಾದಿ 1 ರ ಜಮೀನಿನ ಮದ್ಯೆ ಬಿದಿರಿನ ತಂತಿಯನ್ನು ಪಂಚಾಯತಿಯವರು ಹಾಕಿರುವುದಿಲ್ಲ ಸಾಕ್ಷಿಯು ಮುಂದುವರೆದು ಪ್ರತಿವಾದಿಗಳೇ ಹಾಕಿರುತ್ತಾರೆ ಎಂದು ನುಡಿದಿರುತ್ತಾರೆ. ದಾವೆಯನ್ನು ನಾನು ದಾವಾ ಆಸ್ತಿಗೆ ಸಂಬಂದಪಟ್ಟಂತೆ ನ್ಯಾಯಾಲಯಕ್ಕೆ ಹಾಕಿರುತ್ತೇವೆ. ನಾನು ದಾವೆಯನ್ನು ಪ್ರತಿವಾದಿ 2 ರ ಮೇಲೆ ಹಾಕಿರುತ್ತೇನೆ. ನಾನು ಹನುಮಂತ ಶೆಟ್ಟರನ್ನು ಪಕ್ಷವಾದಿಯನ್ನಾಗಿ ಮಾಡಿರುವುದಿಲ್ಲ. ಯಾವುದೇ ವ್ಯಾಜ್ಯಾ ಕಾರಣ ಇಲ್ಲದೇ ಇದ್ದರೂ ಈ ದಾವೆಯನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಮತ್ತು ಪ್ರತಿವಾದಿ 1 ರ ಮದ್ಯೆ ಹಲವಾರು ಭಾರಿ ನ್ಯಾಯಾ ಪಂಚಾಯತಿ ಆಗಿದೆ ಎಂದರೆ ಸರಿ. ಗ್ರಾಮ ಪಂಚಾಯತಿಯವರು ತನಿಖೆ ಮಾಡಿ ಯಾವುದೇ ಒತ್ತುವರಿ ಇಲ್ಲ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಯಾವುದೇ ಒತ್ತುವರಿ ಮಾಡಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿಗಳು 8 ವರೆ ಅಡಿ ಮತ್ತು 2 ರಿಂದ 6 ಅಡಿಗಳನ್ನು ಒತ್ತುವರಿ ಮಾಡಿರುತ್ತಾರೆ. ಪ್ರತಿವಾದಿ 1 ರವರು ತಮ್ಮ ಜಾಗದಲ್ಲೆ ಪಿಲ್ಲರ್‌ನ್ನು ಹಾಕಿ ಚಾವಣಿಯನ್ನು ಹಾಕಿಕೊಂಡು ಯಾವುದೇ ಒತ್ತುವರಿ ಮಾಡಿಲ್ಲ ಎಂದರೆ ಸರಿಯಲ್ಲ. ನಮ್ಮ ಸೈಟ್‌ನ ಉತ್ತರ ದಿಕ್ಕಿಗೆ 60 ಅಡಿ ರಸ್ತೆ ಇದೆ ಎಂದರೆ ಸರಿಯಲ್ಲ. ಉತ್ತರಕ್ಕೆ 60 ಅಡಿ ರಸ್ತೆ ಇದ್ದು ನಮ್ಮ ನಿವೇಶನ ಉತ್ತರ ದಕ್ಷಿಣ 50 ಅಡಿ ಮತ್ತು ಪೂರ್ವ ಪಶ್ಚಿಮ 45 ಅಡಿ ಇದೆ ಎಂದರೆ ಸರಿಯಲ್ಲ. ಅದಕ್ಕೆ ಸಂಬಂದಪಟ್ಟಂತೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಮೂಲತಃ 1ನೇ ಪ್ರತಿವಾದಿಯ ತಂದೆಗೆ ಸೇರಿದ್ದು ಅದನ್ನು ನಾಣ್ಯಾಪುರ ಹನುಮಂತ ಶೆಟ್ಟರಿಗೆ ಮಾರಾಟ ಮಾಡಿದ್ದರು ಎಂದರೆ ಸರಿ. 1ನೇ ಪ್ರತಿವಾದಿ ದಾವಾ ಆಸ್ತಿಯ ದಕ್ಷಿಣ ದಿಕ್ಕಿನಲ್ಲಿ ಇದ್ದಾರೆ ಎಂದರೆ ಸರಿ. ಪ್ರತಿವಾದಿ 1 ರ ದಕ್ಷಿಣ ದಿಕ್ಕಿಗೆ ಪ್ರತಿವಾದಿ 2 ರವರು ಇದ್ದಾರೆ ಎಂದರೆ ಸರಿ. ಪ್ರತಿವಾದಿ 1 ರವರು ತನ್ನ ಜಾಗದಲ್ಲಿ 3 ಅಡಿ ಜಾಗವನ್ನು ಬಿಟ್ಟು ಪಿಲ್ಲರ್, ಮೇಲ್ ಚಾವಣಿ, ಮೆಟ್ಟಿಲು, ಶೌಚಾಲಯ ಮತ್ತು ಪೈಪ್ ಲೈನ್‌ನ್ನು ಹಾಕಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಯಾವುದೇ ಒತ್ತುವರಿ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದಿಂದ ಕೋರ್ಟ್ ಕಮಿಷನರ್ ನೇಮಕಗೊಂಡಿದ್ದಾರೆ ಎಂದರೆ ಸರಿ. ಪ್ರತಿವಾದಿಗಳಿಗೆ ಮೋಸ ಮಾಡುವಾ ಉದ್ದೇಶದಿಂದ ಯಾವುದೇ ಒತ್ತುವರಿ ಮಾಡದೇ ಇದ್ದರೂ ಸಹ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ನನ್ನ ಉತ್ತರ ದಿಕ್ಕಿನ 60 ಅಡಿ ರಸ್ತೆಗೆ ಹತ್ತಿಕೊಂಡಂತೆ 50 X 45 ಅಡಿ ಜಾಗವನ್ನು ಬಿಟ್ಟುಕೊಡಲು ಸಿದ್ದರಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅದರ ಬಗ್ಗೆ ಸಾಕಷ್ಟು ಬಾರಿ ಹೇಳಿದ್ದರು ಎಂದರೆ ಸರಿಯಲ್ಲ. ನಾನು ಪಂಚಾಯತಿದಾರರ ಮಾತನ್ನು ಕೇಳದೇ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಹಾಕಿದ್ದೆ ಎಂದರೆ ಸರಿಯಲ್ಲ.

**ಪ್ರತಿವಾದಿ 3 (ಎ) ರಿಂದ (ಇ) ವಕೀಲರಿಂದ ಪಾಟೀ ಸವಾಲು ಇಲ್ಲ.**

ಮರು ವಿಚಾರಣೆ :-ಇಲ್ಲ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ,
ಹಗರಿಬೊಮ್ಮನಹಳ್ಳಿ.